**<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.</u>**

**<u>ಸಿ.ಸಿ. ನಂ.೬೮೨-೨೦೧೬</u>**

ಪಿ.ಡಬ್ಲ್ಯೂ:೧
ಸಿ.ಡಬ್ಲ್ಯೂ: ೩

ಹೆಸರು : ರಾಜು

ತಂದೆಯ ಹೆಸರು : ಸಿದ್ದಪ್ಪ

ವಯಸ್ಸು : ೫೨ ವರ್ಷ

ಉದ್ಯೋಗ : ವ್ಯವಸಾಯ

ವಾಸಸ್ಥಳ : ಮಾಕನಹಳ್ಳಿ ಅಜ್ಜಂಪುರ ತಾಲ್ಲೂಕು

**<u>ದಿನಾಂಕ.೨೪-೦೨-೨೦೨೧ ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ ರವರಿಂದ.</u>**

ಸಾಕ್ಷಿಗೆ ದಿನಾಂಕ:**೧೬/೧೦/೨೧೪** ರ ಮಹಜರ್ ಅನ್ನು ತೋರಿಸಿ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದು ಸದರಿ ಮಹಜರ್ ಅನ್ನು ನಿಪಿ-೧ ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ೧(ಎ) ಎಂದು ಗರುತಿಸಲಾಗಿದೆ. ಸಾಕ್ಷಿಗೆ ೧ ನೇ ಆರೋಪಿಯ ಸಹಿಗಗಳನ್ನು ೮ ಹಾಳೆಯಲ್ಲಿ ತೋರಿಸಿದ್ದು ಅದನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಒಟ್ಟಾಗಿ ನಿಪಿ-೨ ಎಂದು ಗುರುತಿಸಲಾಗಿದೆ ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-೨(ಎ) ಎಂದು ಗುರುತಿಸಲಾಗಿದೆ. ಸಾಕ್ಷಿಗೆ ೨ ನೇ ಆರೋಪಿಯ ಸಹಿಗಳನ್ನು ೮ ಹಾಳೆಯಲ್ಲಿ ತೋರಿಸಿದ್ದು ಅದನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-೩ ಎಂದು ಗುರುತಿಸಲಾಗಿದೆ ಹಾಗಾ ಸಾಕ್ಷಿಯ ಸಹಿಯನ್ನು ನಿಪಿ-೩(ಎ) ಎಂದು ಗುರುತಿಸಲಾಗಿದೆ. ಸುಮಾರು ೬ ವರ್ಷಗಳ ಹಿಂದೇ ಸದರಿ ಸಹಿಯನ್ನು ನಾನು ಅಜ್ಜಂಪುರ ಪೋಲಿಸ್ ಠಾಣೆಯಲ್ಲಿ ಮಾಡಿದ್ದು ಆಗ ೧ ನೇ ಮತ್ತು ೨ ಆರೋಪಿ ಹಾಜರಿದ್ದು ಆರೋಪಿತರು ನನ್ನ ಸಮಕ್ಷಮ ನಿಪಿ-೨ ಮತ್ತು ೩ ರಂತೆ ಸಹಿ ಮಾಡಿರುತ್ತಾರೆ.

೧ ನೇ ಆರೋಪಿಯು ತನ್ನ ಹೆಬ್ಬೆಟ್ಟು ಗುರುತಿನ್ನು ಸಹ ಮಾಡಿರುತ್ತೇನೆ. ಆ ಸಮಯದಲ್ಲಿ ನಿಪಿ-೧ ರಂತೆ ಮಹಜರ್ ಮಾಡಲಾಗಿದೆ.

**<u>ಪಾಟೀಸವಾಲು ಆರೋಪಿ ಪರ ಟಿ ಎನ್ ಎಮ್ ವಕೀಲರಿಂದ</u>:**

ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ನನ್ನ ಸಹಿಗಳನ್ನು ನಾನು ೨೦೧೪ ರಲ್ಲಿ ಮಾಡಿದ್ದು ದಿನಾಂಕ ನೆನಪಪಿಲ್ಲ. ನಿಪಿ-೧ ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಹಾಗೂ ನಾನು ಅದನ್ನು ಓದಿರುವುದಿಲ್ಲ. ಆರೋಪಿತರು ನನ್ನ ಸಮಕ್ಷಮ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸಿನವರು ಹೇಳಿದ ಪ್ರಕಾರ ಆರೋಪಿತರು ನನ್ನ ಮುಂದೆ ಸಹಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಸಹಿಯನ್ನು ಯಾವ ಉದ್ದೇಶಕ್ಕೆ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸ-೧ ನನ್ನ ಸ್ನೇಹಿತರು. ಚಾಸ-೧ ನನ್ನ ಸ್ನೇಹಿತ ಆದ ಕಾರಣ ನಾನು ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾ.ದಂ. ರವರು, ತರೀಕೆರೆ.